# ಧರ್ಮ, ಅಸ್ಮಿತೆ ಮತ್ತು ಅಧಿಕಾರ - ಒಂದು ವಿಮರ್ಶೆ

**ಡಾ.ಬಸವರಾಜ ಪೂಜಾರ್, ಸಹ ಪ್ರಾಧ್ಯಾಪಕರು-ಕನ್ನಡ, ಎಸ್ ಜಿ ಕಾಲೇಜು,ಕೊಪ್ಪಳ.**

## ಪೀಠಿಕೆ:

ಮನುಷ್ಯ ಮೂಲತಃ ಸ್ವಾರ್ಥಿ ಮತ್ತು ಹಿಂಸಾಮಯಿ, ಮನುಷ್ಯನ ಚಾರಿತ್ರಿಕ ವಿಕಾಸದಲ್ಲಿ ಈ ಅಂಶಗಳು ಕಾಣುತ್ತವೆ. ಮುಖ್ಯವಾಗಿ ಹಿಂಸೆಯೇ ಅಧಿಕಾರದ, ಪ್ರಭುತ್ವದ ಪ್ರಯೋಗ ನೆಲೆಯಾಗಿ ಪರಸ್ಪರ ಸಮುದಾಯಗಳ ನಡುವೆ ಸವಾರಿಯ ಸ್ವರೂಪ ಪಡೆದಿದೆ. ಧಮನಕಾರಿ ಆಯಾಮಗಳಿಗೆ ಹಿಂಸೆಯೇ ಮಾನದಂಡವಾದುದು ಎಂದು ಮನುಷ್ಯ ಬಲವಾಗಿ ನಂಬಿದ್ದಾನೆ. ಹಿಂಸೆಯಿಲ್ಲದೆ ಅಧಿಕಾರ ಮತ್ತು ಪ್ರಭುತ್ವ ಸ್ಥಾಪನೆಯಿಲ್ಲ. ಅದಕ್ಕೆ ನಾಶ ಮಾಡುವ ಅಸ್ತ್ರಗಳನ್ನು ಸೃಷ್ಟಿಸಿದ್ದಾನೆ. ವೈಜ್ಞಾನಿಕತೆ ಬೆಳೆದ ಮೇಲಂತೂ ಹಿಂಸೆಯ ಸ್ವರೂಪ ಅಗೋಚರ ಸ್ಥಿತಿಯನ್ನು ಪಡೆಯಿತು. ಪ್ರಕೃತಿಯ ಅದಮ್ಯ ಶಕ್ತಿಯನ್ನು ಸರ್ವನಾಶ ಮಾಡುವ ದುರಾಲೋಚನೆ ಹಿಂಸೆಯೊಂದಿಗೆ ಸೇರಿಕೊಂಡಿತು. ಭಯ ಮೀರಿದ ಪ್ರಕೃತಿಯ ಆಕ್ರಮಣ ಮನುಷ್ಯ ಸರ್ವಾಧಿಕಾರಿ, ವಿಕೋಪಕ್ಕೊಳಗಾಗಲು ಸಹಕಾರಿಯಾಯಿತು. ಅದಕ್ಕೆ ಹಿಂಸೆಯೇ ಆಕ್ರಮಣಕ್ಕೆ ದಾರಿಯೆಂದು ತಿಳಿಯಲಾಯಿತು. ಸದಾ ಆಕ್ರಮಣಕಾರಿ ನಿಲುವುಗಳೇ ಮನುಷ್ಯನೊಳಗೆ ಬೆಳೆಯುತ್ತಾ ಹೋದವು. ಆಕ್ರಮಣದ ನಿಲುವುಗಳು ಉಳಿಯಲು ಸಂಪತ್ತಿನ ಅಗತ್ಯತೆ ಬೇಕಾಯಿತು. ಸಂಪತ್ತಿನ ವಿಸ್ತರಣೆಗೆ ಕೇಂದ್ರೀಕರಣಕ್ಕೆ ಆಕ್ರಮಿಸುವುದು ಸೋಲಿಸುವುದು ಮುಖ್ಯವಾಯಿತು. ಅದೇ ಮನುಷ್ಯನಲ್ಲಿ ವಿಜೃಂಭಣೆಯ ಮನ್ನಣೆಯಾಯಿತು. ಇದರಿಂದ ಮನುಷ್ಯನನ್ನು ಒಡೆಯಲು, ವಿಭಜಿಸುವ ರಾಕ್ಷಸತ್ವದ ಚಿಂತನೆಯು ಬೆಳೆಯಿತು. ಆಕ್ರಮಣದಲ್ಲಿ ಜಯಶೀಲರಾದವರೆಲ್ಲ ಶ್ರೇಷ್ಠರಾದರು. ಸೋತವರು ಗುಲಾಮರು, ದುರ್ಬಲರು, ಕನಿಷ್ಠರು, ದಾಸುಗಳು ಆದರು. ಈ ಬೆಳವಣಿಗೆ ಮನುಷ್ಯನಲ್ಲಿ ಕಂದರ ಸೃಷ್ಟಿಸಿತು. ಈ ಕಂದರ ಆಕ್ರಮಣದಿಂದ ಸೃಷ್ಟಿಯಾದದ್ದು. ಅದಕ್ಕೆ ಪ್ರಕೃತಿ ಸಹಜತೆಯನ್ನು ಆರೋಪಿಸಲಾಯಿತು. ಶ್ರೇಷ್ಠರೆಲ್ಲರು ಸಾಮಾಜಿಕ ಮರ್ಯಾದೆ, ಅನುಕೂಲಕ್ಕೆ ಭಾಜನರಾದರು. ಸಾಮಾಜಿಕ ನಿರ್ದೇಶಿತ ನಿಯಮಗಳನ್ನು ರೂಪಿಸಿದರು. ಈ ನಿಯಮಗಳು ಮನುಷ್ಯನ ನಡುವಿನ ಕಂದರವನ್ನು ಮತ್ತಷ್ಟು ಬಲಗೊಳಿಸಿದವು. ಮನುಷ್ಯ ಮನುಷ್ಯರ ನಡುವೆ ಸವಾರಿ ಮಾಡುವ ಪ್ರವೃತ್ತಿಗೆ ಸಾಮಾಜಿಕ ನಿಯಮಗಳು ಅಧಿಕೃತ ಮುದ್ರೆಯೊತ್ತಿದವು. ಜಾತಿ, ಅಸ್ಪೃಶ್ಯತೆ, ಅಸಮಾನತೆ. ಲಿಂಗಭೇದಗಳು ಶಾಶ್ವತ ಸಾಮಾಜಿಕ ನಿಯಮಗಳಾದವು. ಈ ಬೆಳವಣಿಗೆ ಮನುಷ್ಯನ ವಿಕಾರಗಳನ್ನು ಹೊರಗೆಡವಿತು. ಇಂತಹ ಹಿಂಸಾಮಯ ಸ್ಥಿತಿಯನ್ನು ವಿರೋಧಿಸುವ, ಸಮಾನತೆಯ ಮೌಲ್ಯವನ್ನು ಬಿತ್ತುವ ಆಶಯದೊಂದಿಗೆ ಧರ್ಮ ಸೃಷ್ಟಿಯಾಯಿತು. ಪ್ರಕೃತಿ ಸಹಯೋಗದೊಂದಿಗೆ ಮನಸ್ಸಿನ ವಿಕಾರಗಳನ್ನು ದರ್ಶಿಸುವ ನೆಲೆಗಳನ್ನು ಸ್ಥಾಪಿಸುವ ಧೋರಣೆ ಧರ್ಮದ್ದಾಗಿತ್ತು. ಆದರೆ, ಪ್ರಭುತ್ವ ಮತ್ತು ಅಧಿಕಾರಗಳು ಧರ್ಮವನ್ನು ತಮ್ಮ ಉಳಿವಿಗೆ ಬಳಸಿಕೊಂಡವು. ಧರ್ಮವನ್ನು ಪ್ರಭುತ್ವ ಮತ್ತು ಅಧಿಕಾರದ ಮಟ್ಟಕ್ಕೊಯ್ದವು. ಧರ್ಮವು ಹಿಂಸೆಯ ವಲಯದೊಳಗೆ ಸೇರ್ಪಡೆಯಾಯಿತು. ಇದು ಮನುಷ್ಯನ ದೊಡ್ಡ ದುರಂತ. ಮತ್ತೆ ಈ ದುರಂತದಿಂದ ಬಿಡುಗಡೆಯಾಗಲು ಧರ್ಮವೇ ಪರ್ಯಾಯವಾಯಿತು. ಜನಸಮುದಾಯಗಳು ಕಾಲ ಕಾಲಕ್ಕೆ ಧರ್ಮವನ್ನು ಬೇರೆ ಬೇರೆ ನೆಲೆಯಲ್ಲಿ

ಭಾವಿಸುವ ಆಲೋಚನೆಯನ್ನು ಮಾಡಿವೆ. ಹಿಂಸೆಗೆ ವಿರುದ್ಧವಾದ ಧಾರ್ಮಿಕ ಆಂದೋಲವನ್ನು ಸೃಷ್ಟಿಸಿವೆ. ಅದಕ್ಕೆ ಅನೇಕ ಧಾರ್ಮಿಕ ಚಿಂತಕರು ಕಾರಣರಾಗಿದ್ದಾರೆ.

ಮನುಷ್ಯ ಎಷ್ಟೇ ಶಕ್ತಿಯುತವಾಗಿ ಹಿಂಸೆಯನ್ನು ಬೆಳೆಸಿದ್ದರೂ ಪ್ರಕೃತಿಯ ನಿಗೂಢತೆಯ ಬಗ್ಗೆ ಭಯವಿದೆ. ಅದನ್ನು ಆರಾಧಿಸುತ್ತಲೇ ಬಂದಿದ್ದಾನೆ. ಭಾರತದಂತಹ ದೇಶದಲ್ಲಿ ಪ್ರಾದೇಶಿಕ ವೈವಿಧ್ಯಕ್ಕನುಗುಣವಾಗಿ ಆರಾಧಿಸುವ ಮನೋಭಾವ ಭಿನ್ನವಿರಬಹುದು. ಅವುಗಳ ಆಶಯ ಮಾತ್ರ ಮನುಷ್ಯನ ನೆಮ್ಮದಿ ಮತ್ತು ಶಾಂತಿ ಇದನ್ನು ಭದ್ರಗೊಳಿಸುವ ಪ್ರಯತ್ನ ಅನೇಕ ಧರ್ಮಗಳು ಮಾಡಿವೆ. ಬುದ್ಧ, ಮಹಾವೀರ, ಲೋಕಾಯತ, ಚಾರ್ವಾಕ, ಸಾಂಖ್ಯ, ನಾಥ, ಆರೂಢ, ಅವಧೂತ, ಶೈವ, ವೀರಶೈವ, ದಾಸರ ಪರಂಪರೆಗಳು ಧರ್ಮವನ್ನು ಹೊಸ ರೀತಿಯಲ್ಲಿ ವ್ಯಾಖ್ಯಾನಿಸಿದವು. ವಿಚಲಿತಗೊಂಡ ಸಮುದಾಯಗಳಿಗೆ ಸಹಬಾಳ್ವೆ, ಕರುಣೆಯ ಮಹತ್ವ ಸಾರಿದವು. ಸಾಮಾಜಿಕ ನಿಯಮಗಳ ವಿರುದ್ಧ ಪರ್ಯಾಯ ಜೀವನ ಕ್ರಮವನ್ನು ರೂಪಿಸಿದವು. ಅವರ ನಿಲುವುಗಳು ಧರ್ಮಕ್ಕೆ ಹೊಸ ಚೈತನ್ಯ ನೀಡಿದವು. ಸಮುದಾಯಗಳು ಇವರ ನಿಲುವುಗಳನ್ನು ಒಪ್ಪಿಕೊಂಡರು, ಅವರಂತೆ ಬದುಕನ್ನು ರೂಪಿಸಿಕೊಳ್ಳುವ ಆಲೋಚನೆ ಮಾಡಿದರು. ಆದರೆ ಈ ಧರ್ಮಗಳು ಸ್ವತಂತ್ರ ಅಸ್ತಿತ್ವವನ್ನು ರೂಪಿಸುವಲ್ಲಿ ವಿಫಲವಾದವು. ಯಾವುದೇ ಆಂದೋಲನ ರಾಜಕೀಯ ಸ್ವರೂಪ ಪಡೆಯದೆ ಯಶಸ್ವಿಯಾಗುವುದಿಲ್ಲ. ಅದು ರಾಜಕೀಯ ಸ್ವರೂಪ ಪಡೆದುಕೊಂಡಾಗ ತನ್ನ ನಿಲುವಿನಲ್ಲಿ ರಾಜಿಮಾಡಿಕೊಳ್ಳಬೇಕಾಗುತ್ತದೆ. ಆಗ ಪ್ರಭುತ್ವವು ಅದೇ ಧರ್ಮವನ್ನು ತನ್ನ ಆಶಯಕ್ಕನುಗುಣವಾಗಿ ಮಾರ್ಪಡಿಸುತ್ತದೆ. ಅದು ಅಧಿಕಾರ ಕೇಂದ್ರಿತ ಸಾಂಸ್ಥಿಕ ಧರ್ಮವಾಗುತ್ತದೆ. ಈ ಸಮಸ್ಯೆ ಎಲ್ಲಾ ಧರ್ಮಗಳು ಎದುರಿಸಿವೆ. ಧರ್ಮದ ಆಶಯ ಮತ್ತು ಅಧಿಕಾರ ಪರಸ್ಪರ ವಿರುದ್ಧ ನೆಲೆಯಲ್ಲೇ ಚಲಿಸಿವೆ. ಎಲ್ಲಿಯೂ ಒಂದಾಗಿ ಚಲಿಸಿರುವುದನ್ನು ಚರಿತ್ರೆಯಲ್ಲಿ ಕಾಣುವುದಿಲ್ಲ, ಧರ್ಮ ಅಧಿಕಾರದ ವ್ಯಾಪ್ತಿಗೆ ಒಳಗಾದರೆ ತನ್ನ ನಿಜ ಅಸ್ತಿತ್ವವನ್ನು ಉಳಿಸಲು ಕಷ್ಟವಾಗುತ್ತದೆ. ಕಾರಣ ಅಧಿಕಾರವು ಎಂದೂ ಜನರೊಂದಿಗೆ ಸಹತ್ವದಿಂದ ಜೀವಿಸಿಲ್ಲ, ಸಹತ್ವದೊಂದಿಗೆ ಬದುಕುವ ಬೌದ್ಧಿಕ ಸಾಮರ್ಥ್ಯ ಸಮುದಾಯಗಳಿಗೆ ಇನ್ನೂ ಸಾಧಿಸಲಾಗಿಲ್ಲ. ಒಂದು ವೇಳೆ ಸಾಧಿಸಿದರೂ ಅದು ಜಾತೀಂರು ಕಬಂಧ ಬಾಹುವನ್ನು ಭೇದಿಸಿ ಮುನ್ನಡೆಯುವುದಿಲ್ಲ. ಜಾತೀಯತೆಯನ್ನು ಮೀರುವ ಧಾರ್ಮಿಕ ಸಂಗತಿಗಳು ನಿರ್ಮಾಣಗೊಂಡಿಲ್ಲ. ಧರ್ಮದ ಆಶಯ ಜಾತಿರಹಿತ ಸಮುದಾಯಗಳ ಸಹಬಾಳ್ವೆ. ಕಾಕತಾಳಿಯವೆಂಬಂತೆ ಎಲ್ಲಾ ಧರ್ಮಗಳು ಜಾತಿಯೊಂದಿಗೆ ತನ್ನ ಅಸ್ತಿತ್ವ ಗುರುತಿಸಿಕೊಂಡಿದ್ದು, ಇಲ್ಲವೆ ಪ್ರಭುತ್ವವು ಹಾಗೆ ಜಾತೀಕರಣಗೊಳಿಸುತ್ತದೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಇದು ಇನ್ನಷ್ಟು ಪ್ರಬಲಗೊಂಡಿದೆ. ಈ ಪ್ರಕ್ರಿಯೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಿದೆ. ಸಾಮಾನ್ಯರು ಜಾತಿಹಿಂಸೆಗೆ ಬಲಿಯಾದವರು ಮಾನವೀಯ ಸಂಬಂಧದ ನೆಲೆಯಲ್ಲಿ ಜೀವನವನ್ನು ಕಂಡುಕೊಳ್ಳಲು ಬಯಸಿದಾಗ ಜಾತಿ ಮೀರಿ ಬದುಕಲಾಗಿಲ್ಲ. ಅದನ್ನೇ ಪ್ರಭುತ್ವಶಕ್ತಿಗಳು ಬಂಡವಾಳ ಮಾಡಿಕೊಂಡು ಧರ್ಮಗಳನ್ನು ಜಾತಿ ಆಧಾರಿತವಾಗಿ ನೋಡುವ ದೃಷ್ಟಿಕೋನ ಬೆಳೆಸಿದವು. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಇಂತಹ ಸ್ಥಿತಿ ತಲುಪಲು ಧರ್ಮವು ಮೂಲ ಆಶಯವನ್ನು ಕಳೆದುಕೊಂಡು ಪ್ರಭುತ್ವ ಪರವಾಗಿ ತನ್ನನ್ನು ಗುರುತಿಸಿಕೊಂಡಾಗ, ಪ್ರಭುತ್ವ ವಿರೋಧಿಯಾಗಿ ಧರ್ಮವು ಬೆಳೆದಾಗ ಅದು ಜನರನ್ನು ಒಳಗೊಂಡ ಧರ್ಮವಾಗುತ್ತದೆ. ಇತ್ತೀಚಿನ

ಧರ್ಮದ ಸ್ವರೂಪ ನೋಡಿದರೆ ಅವೆಲ್ಲವೂ ಹಿಂಸೆಯ ಮಾದರಿಯ, ನೈತಿಕ ಅಧಃಪತನದ ಸ್ವರೂಪದಲ್ಲಿ ಮುನ್ನಡೆಯುತ್ತಿವೆ.

ಧರ್ಮ ಸೃಷ್ಟಿಯಾದದ್ದೇ ದಿಕ್ಕು ತಪ್ಪಿದ ಮನುಷ್ಯನಿಗೆ ಒಂದು ನಿಶ್ಚಿತ ದಿಕ್ಕು ತೋರಿಸಲು. ರಾಜಕಾರಣ ಮತ್ತು ಮೋಹದ ಅಧೀನಕ್ಕೆ ಒಳಗಾದ ಮನುಷ್ಯ ಮಾನಸಿಕ ಕುರುಡತನಕ್ಕೀಡಾಗುತ್ತಾನೆ. ಕುರುಡುತನ ನಿವಾರಿಸಿ ಬೆಳಕು ನೀಡುವುದು ಧರ್ಮ, ಧರ್ಮ ಮನುಷ್ಯಾತೀತವಾದ ಪ್ರಕೃತಿ ನಂಬಿಕೆ. ಪ್ರಕೃತಿಯಷ್ಟೆ ಪವಿತ್ರ ನಿಸ್ವಾರ್ಥ ಮನೋಭಾವ ಸೃಷ್ಟಿಸುವುದು ಧರ್ಮ, ಆ ಹಿನ್ನೆಲೆಯಲ್ಲೇ ಧರ್ಮಗಳು ಯೋಚಿಸುತ್ತವೆ. ಆದರೆ, ಧರ್ಮಗಳು ರಾಜಕೀಯ ವಿನ್ಯಾಸಕ್ಕೆ ಒಳಗಾದಾಗ ಮೂಲ ದಾರಿ ತಪ್ಪುತ್ತವೆ. ಎಲ್ಲಾ ಧರ್ಮಗಳಿಗೂ ಈ ಸಮಸ್ಯೆ ಇದೆ. ಈ ಸಮಸ್ಯೆಯನ್ನು ನಿವಾರಿಸಲು ಜನಪರ ಧರ್ಮವನ್ನು ನಿರ್ಮಿಸಲು ಆಧ್ಯಾತ್ಮ ದಂಗೆಗಳು ಸಂಭವಿಸಿವೆ. ಆಧ್ಯಾತ್ಮ ದಂಗೆಗಳೇ ಧರ್ಮವನ್ನು ಉಸಿರಾಡುವಂತೆ ಮಾಡಿವೆ. ಬುದ್ಧ, ಬಸವಣ್ಣ, ಕನಕದಾಸರಂತವರ ಆಧ್ಯಾತ್ಮದಂಗೆ ಶಾಶ್ವತ ಧರ್ಮದ ಅಂತರಾತ್ಮವನ್ನು ನಿರೂಪಿಸಿದವು. ಧರ್ಮ ಅಲೌಕಿಕ ಪಾಂಡಿತ್ಯದ ಪ್ರದರ್ಶನ ಮತ್ತು ಅಧಿಕಾರ ರಾಜಕಾರಣದ ಸಂಕೇತವನ್ನು ಮೀರಿದ ಪ್ರಕೃತಿ ಸಂವೇದನೆಯೆಂಬುದನ್ನು ಇವರು ತಮ್ಮ ಬದುಕಿನ ಮೂಲಕ ವಿಶ್ಲೇಷಿಸಿದರು. ಧರ್ಮಕ್ಕೆ ಸಾಮಾಜಿಕ ಚಳುವಳಿಯ ಆದರ್ಶ ನೀಡಿದರು. ಇದರಿಂದಾಗಿ ಮನುಷ್ಯ ಧರ್ಮವನ್ನೂ ಅಮಾನುಷ, ಪ್ರಕೃತಿಯಾತೀತ ತತ್ವವಾಗಿ ಭಾವಿಸಲಿಲ್ಲ. ಅದೊಂದು ಪ್ರೇಮ, ಕಾಮ, ಮೋಹ, ಆಕರ್ಷಣೆ, ರಾಜಕೀಯ, ಸಾಮಾಜಿಕತೆಯನ್ನೊಳಗೊಂಡ ಸಂವೇದನೆ ಎಂದು ತಿಳಿಯಲಾಯಿತು.

## ಉಪಸಂಹಾರ:

ಇಲ್ಲಿ ಗಮನಿಸಬೇಕಾದದ್ದು ಈ ಸಂವೇದನೆ ಕುರುಹು ಮತ್ತು ಸಂಕೇತವನ್ನು ಅಲ್ಲಗಳೆಯುವಂತದ್ದು. ಎಲ್ಲಾ ಧರ್ಮಗಳು ಕುರುಹುವಾಗಲು ಪ್ರಯತ್ನಿಸುತ್ತವೆ ಧರ್ಮ ಕುರುಹುವನ್ನು ನಂಬಿದರೆ ಜನವಿರೋಧಿಯಾಗುತ್ತದೆ. ಯಾಕೆಂದರೆ, ಕುರುಹು ಉಳಿಸಿಕೊಳ್ಳುವುದು ಧರ್ಮದ ಮುಖ್ಯ ಧ್ಯೇಯವಾಗುತ್ತದೆ. ಅದಕ್ಕೆ ಧರ್ಮಗಳು ಜಾತಿಗೊಂದು ಮಠ ಸ್ಥಾಪನೆ, ಕಟ್ಟಡ, ಶಿಕ್ಷಣ ಎಂಬ ಮನೋಭಾವ ತಾಳುವುದು. ಈ ಮನೋಭಾವದಲ್ಲಿ ಅರಿವಿಗಿಂತ ಕುರುಹುವೇ ಮುಖ್ಯವಾಗುತ್ತದೆ. ಇಲ್ಲಿ ಅರಿವು ಮುಖ್ಯವಾಗಬೇಕು. ಚರಿತ್ರೆಯಲ್ಲಿ ಅರಿವು ಮಾನ್ಯತೆ ಪಡೆಯಲಿಲ್ಲ. ಆಗ ಮನುಷ್ಯನಿಂದ ಧರ್ಮದ ಉಳಿವು ಎಂಬ ಧೋರಣೆ ಹುಟ್ಟುತ್ತದೆ. ಧರ್ಮಕ್ಕಾಗಿ ಮನುಷ್ಯನಲ್ಲ. ಮನುಷ್ಯನಿಗಾಗಿ ಧರ್ಮ ಎಂಬುದು ಮಾಯವಾಗುತ್ತದೆ. ಈಗ ಆಗುತ್ತಿರುವ ಬೆಳವಣಿಗೆ ಈ ಪರಿಯದು. ಇದರಿಂದ ಬಿಡುಗಡೆಯಾಗಿ ಧರ್ಮಕ್ಕೆ ಅರಿವಿನ ಬೆಳಕು ನೀಡಬೇಕಿದೆ. ಅದು ಧರ್ಮಾಧಿಕಾರದ ಮೂಲಕ ಧರ್ಮವನ್ನು ರಕ್ಷಿಸುವುದರಿಂದ ಆಗಬೇಕಿದೆ. ಪ್ರತಿಯೊಂದು ಜಾತಿಗಾಗಿ ಧರ್ಮಕ್ಕೆ ಸ್ಥಾನ ನೀಡಿ, ಧರ್ಮಾಧಿಕಾರಿಯನ್ನು ನೇಮಿಸುತ್ತಿವೆ. ಪ್ರಬಲ ಜಾತಿಗಳು ಧರ್ಮದಿಂದ ರಾಜಕೀಯ ಅಧಿಕಾರ ಪಡೆಯುವ ಪ್ರಯತ್ನ ಮಾಡುತ್ತಿವೆ. ಇದರಿಂದ ದುರ್ಬಲ ಜಾತಿಗಳ ಏನಾಗಬೇಕೆಂಬುದನ್ನು ಗಂಭೀರವಾಗಿ ಯೋಚಿಸಬೇಕು.

## ಆಕರ ಗ್ರಂಥಗಳು:


- ಶತಮಾನದ ಸಾಹಿತ್ಯ ವಿಮರ್ಶೆ– ಸಂ. ಡಾ. ಎಚ್.ಎಸ್. ರಾಘವೇಂದ್ರರಾವ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧.
- ಸಾಹಿತ್ಯ ವಿಮರ್ಶೆ– ಡಾ. ಸಿ.ಎನ್. ರಾಮಚಂದ್ರನ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮.
- ಪ್ರಾಚೀನ ಭಾರತದಲ್ಲಿ ದಾರ್ಶನಿಕ ಸಂಘರ್ಷ ಮತ್ತು ಅದರ ಸಾಮಾಜಿಕ ಮಹತ್ವ, ಕೆ.ಎಲ್. ಗೋಪಾಲಕೃಷ್ಣ ರಾವ್, ನವಕರ್ನಾಟಕ ಪ್ರಕಾಶನ, ೨೦೦೧.
- ಭಾರತೀಯ ಸಮಾಜ ಮತ್ತು ಸಾಮಾಜಿಕ ಚಿಂತನೆ-೧, ಪ್ರೊ. ಶೋಭಾದೇವಿ ಚಕ್ಕಿ, ಎಸ್ ಎಸ್ ಭಾವಿಕಟ್ಟಿ ಪ್ರಕಾಶನ, ೨೦೧೧.


IJCRT